ದಿನಾಂಕ 04-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಯು.ಕೆ.ವೈ. ವಕೀಲರಿಂದ

ನಾನು ತುರ್ವಿಹಾಳದಲ್ಲಿ ಮನೆ ಕಟ್ಟಿರುತ್ತೇನೆ. ಸಾಲ ಪಡೆದು ಮನೆ ಕಟ್ಟಿರುತ್ತೇನೆ. ರೂ. 18,80,000/- ಸಾಲ ಪಡೆದುಕೊಂಡಿದ್ದೆ. ಸದರಿ ಸಾಲವನ್ನು ಸನ್ 2017-18 ರಲ್ಲಿ ಪಡೆದುಕೊಂಡಿದ್ದೆ. ಸಾಕ್ಷಿಗೆ ನೀವು ಆದಾಯ ತೆರಿಗೆ ಪಾವತಿ ಮಾಡಿದ್ದೀರಾ ಎಂಬ ಪ್ರಶ್ನೆಗೆ ತಾನು ದೈಹಿಕ ನ್ಯೂನ್ಯತೆ ಹೊಂದಿದ್ದರಿಂದ ಕಟ್ಟುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಒಟ್ಟು ಎಷ್ಟು ಬ್ಯಾಂಕ್‌ಗಳಲ್ಲಿ ಸಾಲ ಮಾಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಕೆನರಾ ಬ್ಯಾಂಕ್‌ನಲ್ಲಿ ಮನೆ ಕಟ್ಟುವ ಕಾಲಕ್ಕೆ ಸಾಲ ಪಡೆದುಕೊಂಡಿದ್ದೆ ಎಂದು ನುಡಿಯುತ್ತಾರೆ. ನನ್ನ ಮಗ ಶೈಕ್ಷಣಿಕ ವಿದ್ಯಾಭ್ಯಾಸಕ್ಕಾಗಿ ಪಡೆದ ಸಾಲವನ್ನು ಸಹ ಕೆನರಾ ಬ್ಯಾಂಕ್‌ನಲ್ಲಿ ಮಾಡಿದ್ದೆ. ನಾನು ಹತ್ತಿಗುಡ್ಡದಲ್ಲಿ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಮುಖ್ಯ ಗುರುಗಳಾಗಿ ಕರ್ತವ್ಯ ನಿರ್ವಹಿಸಿದ್ದೆ. ಪ್ರತಿವಾದಿಯ ಊರು ಹತ್ತಿಗುಡ್ಡ ಎಂದರೆ ಸರಿ. ನಾನು ಹತ್ತಿಗುಡ್ಡದಲ್ಲಿ ಶಿಕ್ಷಕನೆಂದು ಕರ್ತವ್ಯ

ಮಾಡುವ ಕಾಲಕ್ಕೆ ಪ್ರತಿವಾದಿ ಪರಿಚಯ ಆಗಿರುತ್ತದೆ. 2013-14 ರಿಂದ ಪ್ರತಿವಾದಿಯ ಪರಿಚಯ ಇದೆ. ಶಾಲೆಯ SDMC ಸದಸ್ಯರ ಪಟ್ಟಿಯಲ್ಲಿ ಪ್ರತಿವಾದಿಯನ್ನು ಸೇರಿಸಿಕೊಂಡಿರಲಿಲ್ಲ. ಪ್ರತಿವಾದಿಗೆ ಸಾಲ ನೀಡುವ ಸಂದರ್ಭದಲ್ಲಿ ನಾನು, ನನ್ನ ಹೆಂಡತಿ, ಸೋಮಶೇಖರ, ತಿಮ್ಮನಗೌಡ ಇದ್ದೆವು.

ನನ್ನ ಶಾಲೆಯ ಕರ್ತವ್ಯದ ಅವಧಿ ಬೆ. 10-00 ರಿಂದ ಸಂಜೆ 4-30 ರವರೆಗೆ ಇತ್ತು. ಪ್ರತಿವಾದಿಗೆ ಸಾಲದ ದುಡ್ಡನ್ನು ನನ್ನ ಹೆಂಡತಿ ಏಣಿಸಿ ನೀಡಿರುತ್ತಾಳೆ. ಸದರಿ ದುಡ್ಡನ್ನು ನನ್ನ ಹೆಂಡತಿಗೆ ಆಕೆಯ ಅಣ್ಣ, ತಂದೆ-ತಾಯಿಯರು ನೀಡಿದ್ದು, ಅದನ್ನು ಒಟ್ಟುಗೂಡಿಸಿ ಇಟ್ಟಿದ್ದರು. ಅದನ್ನೇ ಪ್ರತಿವಾದಿಗೆ ನೀಡಿರುತ್ತಾಳೆ. ಈ ದಾವೆಯಲ್ಲಿ ಹೇಳಿರುವ ಹಣ ನನ್ನ ಹಣ ಅಲ್ಲ ಎಂದರೆ ಸರಿ. ಅದು ನನ್ನ ಹೆಂಡತಿ ತನ್ನ ಉಳಿತಾಯದಿಂದ ಕೂಡಿಟ್ಟ ಹಣ ಎಂದು ನುಡಿಯುತ್ತಾರೆ. ನನ್ನ ಹೆಂಡತಿ ಸಾಲದ ಹಣ ಏಣಿಸಿ ನೀಡುವ ಕಾಲಕ್ಕೆ ನಾನೂ ಕೂಡ ಹಾಜರಿದ್ದೆ. ಸದರಿ ಹಣವನ್ನು ತುರ್ವಿಹಾಳದಲ್ಲಿ ನೀಡಿದ್ದೇವು ನನ್ನ ಮನೆಯ ಪಕ್ಕದ ಖಾಲಿ ನಿವೇಶನಕ್ಕೆ ಹೋಗಿ ಅಲ್ಲಿ ಹಣ ನೀಡಿದ್ದೇವು. ಹಣ ಪಡೆದುಕೊಳ್ಳಲು ಪ್ರತಿವಾದಿ ಒಬ್ಬನೇ ಬಂದಿದ್ದ. ಪ್ರತಿವಾದಿಗೆ ಸಾಲ ನೀಡುವ ಕಾಲಕ್ಕೆ ಆತನ ಮನೆಯವರಿಗೆ ವಿಚಾರಿಸಿಲ್ಲ. ಮುಂದುವರೆದು ಸಾಕ್ಷಿ ಪ್ರತಿವಾದಿ ತನ್ನ ಆಸ್ತಿ ತಾನು ಕೊಡುತ್ತಿದ್ದೇನೆ ಎಂದು ಹೇಳಿದ್ದ ಎಂದು ನುಡಿಯುತ್ತಾರೆ.

ಪ್ರತಿವಾದಿ ಸಂಜೆ 5-30 ರಿಂದ 6-00 ರ ಸುಮಾರಿಗೆ ನನ್ನ ಮನೆಯ ಹತ್ತಿರ ಬಂದಿದ್ದ. ಆತನಿಗೆ ನಾವು ರೂ. 1,20,000/- ಹಣ ನೀಡಿದ್ದೇವು. ಸದರಿ ರೂ. 1,20,000/- ರೂ. 500/- ಮತ್ತು ರೂ. 100/- ಮುಖಬೆಲೆ ನೋಟುಗಳಾಗಿದ್ದವು.

ಉಪನೊಂದಣಾಧಿಕಾರಿ ಕಛೇರಿಗೆ ನಾನೂ ಸಹ ಹೋಗಿದ್ದೆ. ನಿ.ಪಿ. 1 ನ್ನು ನೊಂದಣಿ ಮಾಡಿಸುವ ಕಾಲಕ್ಕೆ ಪ್ರತಿವಾದಿಗೆ ನೊಂದಣಿ ಕಛೇರಿಯಲ್ಲಿ ಯಾವುದೇ ಹಣ ನೀಡಿಲ್ಲ. ನಾನು ಉಪನೊಂದಣಾಧಿಕಾರಿ ಕಛೇರಿಗೆ ನಿ.ಪಿ. 1 ನ್ನು ನೊಂದಣಿ ಮಾಡಿಸುವ ಕಾಲಕ್ಕೆ ಕರ್ತವ್ಯಕ್ಕೆ ರಜೆ ಪಡೆದುಕೊಂಡ ಬಗ್ಗೆ ನನಗೆ ನೆನಪಿಲ್ಲ, ಆದರೆ ಸಾಯಂಕಾಲ ನೊಂದಣಾಧಿಕಾರಿ ಕಛೇರಿಗೆ ಹೋಗಿದ್ದೆ. ಎಷ್ಟು ಗಂಟೆಗೆ ಸದರಿ ಕಛೇರಿಗೆ ಹೋಗಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ 6-00 ಗಂಟೆ ಆಗಿರಬಹುದು ಎಂದು ನುಡಿಯುತ್ತಾರೆ. ನಾನು ಹೋಗುವಷ್ಟರಲ್ಲಿ ನಿ.ಪಿ. 1 ನೊಂದಣಿಯಾಗಿತ್ತು. ನಾನು ಸಂಜೆ 6-00 ಕ್ಕೆ ನೊಂದಣಿ ಕಛೇರಿಗೆ ಬಂದು ನಿ.ಪಿ. 1 ಕ್ಕೆ ಸಾಕ್ಷಿ ನಂ. 3 ಎಂದು ಸಹಿ ಮಾಡಿದ್ದೇನೆ. ಸೋಮಶೇಖರ ತಂ. ನಾರಾಯಣ ಸಾ. ತುರ್ವಿಹಾಳ ಇವರ ಮುಖ ಪರಿಚಯ ಇದೆ. ಸದರಿಯವರು ನಿ.ಪಿ. 1 ನ್ನು ಬರೆಯುವ 4-5 ವರ್ಷ ಮೊದಲಿನಿಂದ ಪರಿಚಯ ಇದ್ದರು. ಸೋಮಶೇಖರ ನನ್ನ ಮಾತನ್ನು ಕೇಳುತ್ತಾರೆ ಎಂದರೆ ಸರಿಯಲ್ಲ. ನನಗೆ ಸೋಮಶೇಖರನ ಮುಖಪರಿಚಯ ಇದ್ದ ಕಾರಣ ನಾನು ಒಂದು ಮಾತು ಹೇಳಿದ್ದಕ್ಕೆ ಅವರು ಸಾಕ್ಷಿದಾರರಾಗಿ ಸಹಿ ಮಾಡಲು ಬಂದರು. ನನಗೂ ಮೊದಲೇ ಸೋಮಶೇಖರ ಇವರು ನೊಂದಣಿ ಕಛೇರಿಗೆ ಬಂದರು.

ಎಷ್ಟು ಗಂಟೆಗೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿದಾರ ನಂ. 1 ಶಿವಪ್ಪ ತಂ. ದೊಡ್ಡಪ್ಪ, ಸಾ. ಸಿಂಧನೂರು ಇವರ ಮುಖಪರಿಚಯ ಸಹ ನನಗೆ ಇದೆ. ಸದರಿ ಶಿವಪ್ಪ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಶಿವಪ್ಪ ತಂ. ದೊಡ್ಡಪ್ಪ ಯಾವಾಗಲೂ ಸಿಂಧನೂರಿನ ಉಪ ನೊಂದಣಾಧಿಕಾರಿ ಕಛೇರಿಯಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ. 1 ರ ಸಾಕ್ಷಿದಾರರಾದ ಶಿವಪ್ಪ ಮತ್ತು ಸೋಮಶೇಖರ ಇವರ ಸಮಕ್ಷಮದಲ್ಲಿ ಉಪನೊಂದಣಾಧಿಕಾರಿ ಸಿಂಧನೂರಿನಲ್ಲಿ ಪ್ರತಿವಾದಿಗೆ ಯಾವುದೇ ಹಣ ನೀಡಿರುವುದಿಲ್ಲ. ನಿ.ಪಿ. 1 ನ್ನು ಪ್ರತಿವಾದಿಯ ಕಡೆಯಿಂದ ಸಾಲದ ಉದ್ದೇಶಕ್ಕೆ ಪಡೆದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಪ್ರತಿವಾದಿ 4 ಗುಂಟೆ ಜಮೀನು ನಮಗೆ ಕೊಡುತ್ತೇನೆ ಎಂದು ನಿ.ಪಿ. 1 ನ್ನು ಬರೆದುಕೊಟ್ಟಿದ್ದಾನೆಂದು ನುಡಿಯುತ್ತಾರೆ. ಸಾಲದ ಮಾತುಕತೆ ಎಲ್ಲಿ ಆಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ನಿ.ಪಿ. 1 ನ್ನು ಬರೆಯುವ ಒಂದು ವಾರದ ಮೊದಲೇ ಪ್ರತಿವಾದಿ ಹಣ ಕೇಳಿದ್ದ ಅದಕ್ಕೆ ನನ್ನ ಹೆಂಡತಿ ಖರೀದಿ ಮಾಡಿಕೊಟ್ಟರೆ ಹಣ ಕೊಡುತ್ತೇವೆ ಎಂದು ಹೇಳಿದ್ದರಿಂದ ನಿ.ಪಿ. 1 ನ್ನು ಬರೆದುಕೊಟ್ಟಿರುತ್ತಾರೆ.

ಸಾಮಾನ್ಯವಾಗಿ ಯಾವುದೇ ಖರೀದಿ ವ್ಯವಹಾರ ಮಾಡಬೇಕಾದರೆ ಮುಂಗಡ ಹಣ ನೀಡಿ ದಾಖಲೆ ಬರೆದುಕೊಳ್ಳುತ್ತಾರೆ ಎಂದರೆ ಸಾಕ್ಷಿ ನಾವು ಆ ರೀತಿ ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಗೆ 2 ಸಲ ನೋಟೀಸ್ ನೀಡಿದ್ದೆ. ಯಾವ ದಿನಾಂಕ ಮತ್ತು ಯಾವ ವರ್ಷದಲ್ಲಿ 2 ನೋಟೀಸ್ ನೀಡಿದ್ದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಸದರಿ ನೋಟೀಸ್‌ನ್ನು ಬರೆಯಲು ಮಾಹಿತಿ ನಾನು ಮತ್ತು ನನ್ನ ಹೆಂಡತಿ ನೀಡಿದ್ದೇವು.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ, ನೀಡಿ ಮುಂದೂಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

1 ನೇ ಹೆಚ್ಚುವರಿ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,
ಸಿಂಧನೂರು.